# ಬೆಂಗಳೂರಿನ ರಸ್ತೆಗಳ ಅಭಿವೃದ್ಧಿಯನ್ನು ಯೋಜನಾತೀತವಾಗಿ ಮಾಡುವಂತೆ ಒತ್ತಾಯಿಸುವ ಸಾರ್ವಜಕ ಹಿತಾಸಕ್ತಿ ಅರ್ಜಿಯನ್ನು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯವು ವಜಾಗೊಳಿಸಿರುವುದು.

ಪತ್ರಿಕಾ ಪ್ರಕಟಣೆ: 8ನೇ ಜೂನ್ 2015: ಬೆಂಗಳೂರು

ಬೆಂಗಳೂರಿನ ಬಹುತೇಕ ರಸ್ತೆಗಳ ಅಗಲೀಕರಣಗಳಲ್ಲಿ ನಗರ ಯೋಜನೆಯ ಮಾದರಿ ಮತ್ತು ನಿಭಂದನೆ(ಕಾಯ್ದೆ)ಗಳನ್ನು ಉಲ್ಲಂಘನೆಯಾಗಿದೆ ಎಂದು **ಪರಿಸರ ಬೆಂಬಲ ತಂಡ ಮತ್ತು ಇತರೆಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿತರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಂಖ್ಯೆ: 7107/ 2008** ಅನ್ನು ಇಂದು ಮಾನ್ಯ ಉಚ್ಚ ನ್ಯಾಯಾಲಯದ ಪ್ರಧಾನ ಪೀಠಕ್ಕೆ ನೇಮಿತವಾದ ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ. ಸುಬ್ರೋ ಕಮಲ್ ಮುಖರ್ಜಿ ಮತ್ತು ನ್ಯಾಯಮೂರ್ತಿಗಳಾಧ ಶ್ರೀ. ರಾಮ್ ಮೋಹನ್ ರೆಡ್ಡಿ ಯವರುಗಳನ್ನು ಒಳಗೊಂಡ ಮಾನ್ಯ ಉಚ್ಚ ನ್ಯಾಯಾಲಯವು ಎರಡನೇ ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಖಾಸಗಿ ಆಸಕ್ತಿ ಹೊಂದಿದೆ ಎಂಬ ಆಧಾರದ ಮೇಲೆ ಅರ್ಜಿಯನ್ನು ವಜಾಗೊಳಿಸಿದೆ.

ಮಾನ್ಯ ಮುಖ್ಯ ನ್ಯಾಯಮೂರ್ತಿಗಳು, ಸ,ಹಿ,ಅರ್ಜಿಯಲ್ಲಿನ ಒಂದು ಪ್ರಶ್ನೆಗೆ ಉತ್ತರವಾಗಿ ಸಹಿ ಮಾಡಿರುವ ಎರಡನೇ ಅರ್ಜೀದಾರರನ್ನು ಮೊಕದ್ದಮೆಯ ಸ್ವರೂಪವನ್ನು ತಿಳಿಸುವಂತೆ ಪ್ರಶ್ನಿಸಿದಾಗ,ಅರ್ಜಿದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು(ಬಿ,ಬಿ,ಎಂ,ಪಿ) ಬೆಂಗಳೂರಿನ 400 ರಸ್ತೆಗಳನ್ನು ವಿಸ್ತಾರಗೊಳಿಸಲು ಪ್ರಸ್ತಾಪಿಸಿದ ವಿವಿಧ ಬೇಡಿಕೆಗಳನ್ನು ಮತ್ತು ಸಮಾಲೆಂದು 2008 ರಲ್ಲಿ ಅರ್ಜಿದಾರರಿಂದ ಮೊಕದಮ್ಮೆಯನ್ನು ಮಂಡಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು(ಬಿ,ಬಿ,ಎಂ,ಪಿ) 91 ರಸ್ತೆಗಳನ್ನು ವಿಸ್ತಾರಗೊಳಿಸುವಂತೆ ಪ್ರಸ್ತಾಪ ಸಲ್ಲಿಸಿ, ತರುವಾಯ 200 ಕ್ಕೆ ಹೆಚ್ಚಿಸುವುದು. ಇತ್ತೀಚಿನ ಮಾದ್ಯಮಗಳ ವರದಿಗಳ ಪ್ರಕಾರ 400 ವರೆಗೆ ರಸ್ತೆಗಳ ಅಗಲೀಕರಣಗಳ ಬಗ್ಗೆ ಪರ್ಯಾಲೋಚಿಸಲಾಗಿದೆ. ಹಲವಾರು ವರ್ಷಗಳಿಂದ ಸಲ್ಲಿಸಿದ್ದ ಸಾ,ಹಿ,ಅರ್ಜಿಯು ಇಂದು ನ್ಯಾಯಾಲಯದ ಪ್ರಧಾನ ಪೀಠದ ಹಂತಿಮ ವಾದಗಳನ್ನು ಅಭಿವೃದ್ಧಿ ಪಡಿಸುವ ಹಂತವನ್ನು ತಲುಪಿರುತ್ತದೆ ಎಂದು ಉತ್ತರಿಸಿದರು.

ರಸ್ತೆಗಳ ಅಗಲೀಕರಣದಿಂದಾಗಿ, ಬೆಂಗಳೂರು ಒಂದು ಜೀವಂತ ಪರಂಪರೆ ಕ್ಷೇತ್ರವನ್ನು, ನೂರಾರು ವರ್ಷದ ಹಳೆಯ ಕಾಲುದಾರಿಗಳನ್ನು ನಾಶ ಪಡಿಸುತ್ತಿದೆ. ಅದರಲ್ಲೂ ಪಾದಚಾರಿಗಳು, ಸೈಕಲ್ ಸವಾರರು, ಬೀದಿಬದಿ ವ್ಯಾಪಾರಿಗಳು ಮತ್ತು ವಿಶೇಷವಾಗಿ ಸೇರಿದಂತೆ ವಿವಿಧ ರಸ್ತೆಯ ಪಾಲುದಾರರು ಹಕ್ಕುಗಳ ಪರಿಣಾಮಗಳನ್ನು ಅರ್ಜಿಯಲ್ಲಿ ಸಲ್ಲಿಸಲಾಯಿತು ಮತ್ತು ಮನೆಮಾಲೀಕರಿಗೆ ಬಡತನವನ್ನು ಲಕ್ಷ ನಿರೂಪಿಸಲು ಮತ್ತು ವಿಶೇಷವಾಗಿ ನೂರಾರು ವರ್ಷದ ಹಳೆಯ ನೆರೆಯವರಿಗೆ ನೇರವಾಗಿ ಪೀಡಿತರಾಗುತ್ತಾರೆ.1961ರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ(KTCP ಆಕ್ಟ್) ಕಾಯ್ದೆಗಳ ನಿರ್ದಿಷ್ಟ ವಿಭಾಗದ ಸಮಗ್ರ ನಿಬಂಧನೆಗಳನ್ನು ಕಡ್ಡಾಯವಾದ ಉಲ್ಲಂಘನೆ ಕೈಗೊಳ್ಳಲಾಗಿದೆ.ಅದರಲ್ಲೂ ನಿರ್ದಿಷ್ಟವಾಗಿ ವಿಭಾಗ 14.ಎ.ರಲ್ಲಿ ತಿಳಿಸಿರುವಂತೆ ಯೋಜನೆಗಳಲ್ಲಿ ಮತ್ತು ಬದಲಾಯಿಸಲಾದ ಪರಿಣಾಮಗಳ ಸಂಕೀರ್ಣ ನಿರ್ಧಾರಗಳ ಸೂತ್ರೀಕರಣದಲ್ಲಿ ಸಾರ್ವಜನಿಕ ಭಾಗವಹಿಸುವಿಕೆಯನ್ನು ಮಾಡಬೇಕಾಗಿದೆ. ಎಂದು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸಾರ್ವಜನಿಕ ಆಸಕ್ತಿಗೆ ವಿರುದ್ಧವಾಗಿ ರಸ್ತೆಗಳ ಅಗಲೀಕರಣವಾಗುತ್ತಲೇ ಇಲ್ಲಿರುವ ರಸ್ತೆಗಳು ದಟ್ಟಣೆಯಾಗುತ್ತಿವೆ, ಸಂಚಾರಿ ಮುಕ್ತ ಹರಿವು ಹೇಗೆ, ಎಂದು ನ್ಯಾಯಾಲಯವು ಕೇಳಿದಾಗ. ಪ್ರತಿಕ್ರಿಯೆಯಾಗಿ ಅರ್ಜಿದಾರರು ಉಚಿತ ಸಂಚಾರಕ್ಕೆ ಸಾರ್ವಜನಿಕ ಹಿತಾಸಕ್ತಿಗಳಲ್ಲಿ KTCP ಕಾಯ್ದೆಯ ನಿಭಂದನೆಗಳಿಗೆ ಅನುಸಾರವಾಗಿ ಬೇಡುವಂತಹ, ಬಹಿರಂಗವಾಗಿ ನೈಸರ್ಗಿಕವಾಗಿ ವಿಸ್ತರಿಸಿ ಎಚ್ಚರಿಕೆಯಿಂದ ಒತ್ತಾಯಿಸಿ ಮತ್ತು ಪ್ರಜಾಪ್ರಭುತ್ವ ಯೋಜನೆಗಳನ್ನು ವಿವಿಧ ಪ್ರಗತಿಪರ ಮಾದರಿ ಮತ್ತು ಮಾರ್ಗದರ್ಶಿಗಳನ್ನು ಅನುಸರಣೆಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಕೇವಲ ವಾಹನ ಚಾಲಕರಿಗೆ ಆಸಕ್ತಿಯ ಗಮನಹರಿಸಿದ್ದ ರಸ್ತೆಗಳು ವಿಸ್ತಾರಗೊಳಿಸುವ ಪ್ರಸ್ತಾಪನೆಯೊಂದರಲ್ಲಿ ಹಗುರವಾಗಿ ತೆಗೆದುಕೊಂಡ ಸಂಧರ್ಭಗಳು ಇರುತ್ತವೆ ಇದು ಖಾಸಗಿ ಆಸ್ತಿ ಅಕ್ರಮಣಕಾರಿಯಾಗಿ (TDR) ಅನ್ನು ಸ್ವಯಂಪ್ರೇರಿತ ಸಹ

ಅಗಲವಾಗುತ್ತಲೇ ಭೂಮಿ ಭದ್ರತೆಗೆ ಅಭಿವೃದ್ಧಿ ಹಕ್ಕುಗಳ(TDR) ಯೋಜನೆ ವರ್ಗಾವಣೆಯ ಪ್ರಚಾರ ಪಡೆದುಕೊಂಡಿತು ಎಂದು ಸಲ್ಲಿಸಲಾಯಿತು. ಯಾವುದೇ ರೀತಿಯಲ್ಲಿ ರಸ್ತೆ ವಿಸ್ತರಣೆ ಪ್ರಸ್ತಾಪಗಳನ್ನು KTPC ಕಾಯ್ದೆಯ ದಾರಿ ತಪ್ಪಿಸಿ ಯಾವುದೇ ಸಂದರ್ಭದಲ್ಲಿ TDR ಸಹ ಬಡ್ಡಿಯನ್ನು ಪಡೆಯಲಾಗುತ್ತಿದೆ.

ನ್ಯಾಯಮೂರ್ತಿ ರಾಮ್ ಮೋಹನ್ ರೆಡ್ಡಿಯವರು ಒಂದಾನೊಂದು ಕಾಲದಲ್ಲಿ ನಿವೃತ್ತಿ ವೇತನದಾರರಿಗೆ ಬೆಂಗಳೂರು ಸ್ವರ್ಗವಾಗಿದೆ ಎಂದು ಕರೆಯಲಾಗುತ್ತಿತ್ತು ಆದರೂ ಒಂದು ಬೆಂಗಳೂರು ಅಭಿವೃದ್ಧಿ ತಡೆ ಹಿಡಿಯಲು ಸಾದ್ಯವಿಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ಅರ್ಜಿದಾರರು ಪ್ರತಿಕ್ರಿಯಿಸಿ ನಮ್ಮದು ರಸ್ತೆ ಅಗಲೀಕರಣ ವಿರುದ್ಧ ಅಲ್ಲ. ಇವತ್ತು ಅಂದರೆ ವಿಸ್ತರಣೆ ಎಲ್ಲಾ ಹಕ್ಕುಗಳನ್ನು ಪರಿಗಣಿಸಿ, ನಗರ ಯೋಜನೆ ಮಾದರಿ ಮತ್ತು ಗುಣಮಟ್ಟವನ್ನು ಅನುಸರಣೆಮಾಡಿ, ಶಾಸನಬದ್ಧ ಪ್ರಕ್ರಿಯೆಗಳ ಮೂಲಕ ಕಡ್ಡಾಯವಾಗಿ ನಿರ್ಧರಿಸಬೇಕಾಗುತ್ತದೆ.

ಈ ವಿಷಯದಲ್ಲಿ ಮನವಿದಾರರ ಆಸಕ್ತಿಯ ಬಗ್ಗೆ ಪೀಠ ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ 2ನೇ ಮನವಿದಾರರು, ತಾವು ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಿನ್ನವಿಸಿದರು. ನ್ಯಾಯಾಲಯದ ಮುಂದೆ ಸಂಪೂರ್ಣವಾಗಿ ಬಹಿರಂಗಪಡಿಸುವ ಉದ್ದೇಶದಿಂದ, ಅವರ ಕಛೇರಿಯು, ರಸ್ತೆ ವಿಸ್ತರಣೆಯ ಪ್ರಸ್ತಾವನೆಯಿರುವಂತಹ ಒಂದು ರಸ್ತೆಯಲ್ಲಿಯೇ ಇರುವುದಾಗಿ ತಿಳಿಸಿದರು. ಈ ಹಂತದಲ್ಲಿ ನ್ಯಾಯಾಧೀಶ ಶ್ರೀ ರಾಮ್ ಮೋಹನ್ ರೆಡ್ಡಿ ಅವರು, ಮನವಿದಾರರು ಸಾರ್ವಜನಿಕ ಹಿತಾಸಕ್ತಿಯಿರುವಂತಹ ವಿಷಯದಲ್ಲಿ ಖಾಸಗಿ ಆಸಕ್ತಿಯೊಂದಿಗೆ ಬಂದಿರುವುದಾಗಿ ಗೋಚರಿಸುತ್ತದೆ ಎಂದರು. ಗೌರವಾನ್ವಿತ ಮುಖ್ಯ ನ್ಯಾಯಾಧೀಶರೂ ಸಹ ಈ ಅಭಿಪ್ರಾಯವನ್ನು ಸಮ್ಮತಿಸಿ, ಸಾರ್ವಜನಿಕ ಹಿತಾಸಕ್ತಿಯಿರುವಂತಹ ವಿಷಯದಲ್ಲಿ ಖಾಸಗಿ ಆಸಕ್ತಿಯ ಅನುಮಾನವಿರಬಾರದು ಎಂದರು. ಇದಕ್ಕೆ ಪ್ರತಿಕ್ರಿಯೆಯಾಗಿ ಮನವಿದಾರರು ಪ್ರಧಾನ ಪೀಠಕ್ಕೆ, ತಾವು ಕೇವಲ ಸಾರ್ವಜನಿಕ ಹಿತಾಸಕ್ತಿಯಿಂದ ಬಂದಿರುವುದಾಗಿ ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಕಾರಣಕ್ಕೂ ಯಾವುದೇ ಖಾಸಗಿ ಆಸಕ್ತಿಯನ್ನು ಹೊಂದಿಲ್ಲ ಎಂದು ಅಭಿಪ್ರಾಯಪಟ್ಟರು. ಜೊತೆಗೆ, ತಾವು ಸಹಯೋಗ ಹೊಂದಿರುವ ಹಾಗೂ ಕೆಲಸ ನಿರ್ವಹಿಸುತ್ತಿರುವ, ಲಾಭದ ಉದ್ದೇಶವಿಲ್ಲದಿರುವಂತಹ ಸಾರ್ವಜನಿಕ ದತ್ತಿ ಸಂಸ್ಥೆ ಪರಿಸರ ಬೆಂಬಲ ತಂಡ, ಮೊದಲನೆಯ ಸಾ.ಹಿ.ಅರ್ಜಿದಾರರ ಮನವಿದಾರರಾಗಿದ್ದು, ಕಾಕತಾಳೀಯವಾಗಿ ಇದರ ಕಛೇರಿಯೂ ಸಹ ವಿಸ್ತರಣೆ ಪ್ರಸ್ತಾನವೆಯಿರುವಂತ ರಸ್ತೆಯಲ್ಲಿಯೇ ಇರುವುದಾಗಿ ತಿಳಿಸಿದರು. ಈ ಪ್ರಕರಣವನ್ನು ದಾಖಲಿಸುವ ಸಮಯದಲ್ಲಿ 1ನೇ ಮನವಿದಾರರಾದ ಇಎಸ್‌ಜಿ, ರಸ್ತೆ ವಿಸ್ತರಣೆ ಯೋಜನೆಯ ಪರಿಣಾಮವಿಲ್ಲದಿರುವಂತಹ ನೆರೆಯಲ್ಲಿತ್ತು. ಆದರೂ ಒಂದು ವೇಳೆ ರಸ್ತೆ ವಿಸ್ತರಣೆಯಿಂದಾಗಿ ಪರಿಣಾಮ ಉಂಟಾಗುವ ಸಂಭವ ಒದಗಿದಲ್ಲಿ 1ನೇ ಮನವಿದಾರು ತಮ್ಮ ಬಾಡಿಗೆ ಸ್ಥಳದಲ್ಲಿರುವ ಕಛೇರಿಯನ್ನು ಸ್ಥಳಾಂತರಗೊಳ್ಳುತ್ತದೆ. ಈ ಪ್ರಕಾರವಾಗಿ, ಈ ವಿಷಯದಲ್ಲಿ ತಮಗೆ ಯಾವುದೇ ವೈಯಕ್ತಿಕ ಆಸಕ್ತಿ ಇರುವುದಿಲ್ಲ ಎಂದು, ತಮ್ಮ ಮನವಿಯನ್ನು ಪರಿಗಣಿಸಬೇಕೆಂದು ಗೌರವಾನ್ವಿತ ಪೀಠದ ಮುಂದೆ ಭಿನ್ನವಿಸಿದರು. 1ನೇ ಹಾಗೂ 3ನೇ ಮನವಿದಾರರ ವಕೀಲರೂ ಸಹ, ಇಂತಹ ಆಧಾರದ ಮೇಲಿನ ಪಿಐಎಲ್‌ನ್ನು ವಜಾಮಾಡುವ ತನ್ನ ನಿಲುವನ್ನು ಮರುಪರಿಶೀಲಿಸುವಂತೆ ಭಿನ್ನವಿಸಿದರು.

ಈ ಮನವಿಗಳನ್ನು ತಳ್ಳಿಹಾಕಿದ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಧಾನ ಪೀಠ, 2ನೇ ಮನವಿದಾರರು ಖಾಸಗಿ ಆಸಕ್ತಿಯನ್ನು ಹೊಂದಿರುವುದಾಗಿ ತಿಳಿಸಿ ಸಾ.ಹಿ.ಅ.ಯನ್ನು ವಜಾಗೊಳಿಸಿದರು. ಮತ್ತು ತಮಗೆ ರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ ಯಾವುದಾದರೂ ಖಾಸಗಿ ಆಸಕ್ತಿಯಿದ್ದರೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಮನವಿ ಸಲ್ಲಿಸುವಂತೆ 2ನೇ ಮನವಿದಾರರಿಗೆ ಸೂಚಿಸಿತು.

2008ರಲ್ಲಿ ಗೌರವಾನ್ವಿತ ಕರ್ನಾಟಕದ ಉಚ್ಚ ನ್ಯಾಯಾಲಯದ ಮುಂದೆ ಪಿಐಎಲ್ ಅನ್ನು ದಾಖಲಿಸಿದಾಗಿನಿಂದ, ಪ್ರಗತಿಪರ ನಗರೀಕರಣದ ಮೌಲ್ಯಗಳನ್ನು ಪ್ರೋತ್ಸಾಹಿಸುವಂತಹ ಹಲವಾರು ಮಧ್ಯಂತರ ನಿರ್ದೇಶನಗಳನ್ನು ನೀಡಿದೆ ಮತ್ತು ಈ ರೀತಿ ರಸ್ತೆ ವಿಸ್ತರಣೆ ಮಾಡುವುದರಿಂದ ನಿಜವಾಗಿಯೂ ಸಂಚಾರ ದಟ್ಟಣೆಯ ಸಮಸ್ಯೆ

ಪರಿಹಾರವಾಗುವುದೇ ಎಂದು ಪ್ರದರ್ಶಿಸಲು ಪ್ರಾಧಿಕಾರಗಳಿಗೆ ಸೂಚಿಸಿದೆ. 2ನೇ ಮನವಿದಾರರ ಅಂಗೀಕೃತ ಸ್ಥಾನವನ್ನು (*ಟಿಂಭಿಣ , ಣಚಿಟಿಜು*), ಎಂಟು ವರ್ಷಗಳಲ್ಲಿ, ಗೌರವಾನ್ವಿತ ಉಚ್ಛ ನ್ಯಾಯಾಲಯದಲ್ಲಿ ಈ ಪ್ರಕರಣದ ವಿಚಾರಣೆ ನಡೆದಾಗ ಹಾಗೂ 45ಕ್ಕೂ ಹೆಚ್ಚಿನ ಹಿಂದಿನ ವಿಚಾರಣೆಗಳಲ್ಲಿ ಎಂದಿಗೂ ವಿವಾದವಾಗಿಲ್ಲ. ಈ ಹಿನ್ನೆಲೆಯಲ್ಲಿ ಗೌರವಾನ್ವಿತ ನ್ಯಾಯಾಲಯ ಈಗ ಈ ಪಿಐಎಲ್ ಅನ್ನು ಈ ರೀತಿಯಾಗಿ ವಜಾಗೊಳಿಸಿರುವುದು ಅತ್ಯಂತ ದುರಾದೃಷ್ಟಕರ. ಈ ವಿಷಯದಲ್ಲಿ ಮನವಿದಾರರು, ನ್ಯಾಯ ಮತ್ತು ಸಮಾನತೆಗಾಗಿ ಸಾರ್ವಜನಿಕ ಹಿತಾಸಕ್ತಿಗಾಗಿ ತಮ್ಮ ಪ್ರಯತ್ನವನ್ನು ಮುಂದುವರೆಸಲಿದ್ದಾರೆ.

**ಹಿನ್ನೆಲೆ:**
ಪರಿಸರ ಬೆಂಬಲ ತಂಡ, ಸಿವಿಕ್ ಬೆಂಗಳೂರು ಮತ್ತು ಇತರೆ ಹಲವು ಗುಂಪುಗಳು, ರಸ್ತೆ ವಿಸ್ತರಣೆಯ ಪ್ರಸ್ಥಾವನೆಯನ್ನು, ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡುವುದು, ಜೊತೆಗೆ ಪಾದಚಾರಿಗಳು ಹಾಗೂ ಸೈಕಲ್ ಸವಾರರ ಸುರಕ್ಷಿತ ಮತ್ತು ಸುಭದ್ರ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಟ್ಟಾಗ ಮಾತ್ರ ಕೈಗೊಳ್ಳಬೇಕೆಂದು ವಕಾಲತ್ತು ವಹಿಸುತ್ತಿವೆ. ರಸ್ತೆ ವಿಸ್ತರಣೆಯಂತಹ ಯೋಜನೆಗಳು ಮೂಲಭೂತವಾಗಿ ನಗರಗಳನ್ನು ಪರಿವರ್ತಿಸುತ್ತವೆ ಹಾಗೂ ಬೃಹತ್ ಮಹಾನಗರಗಳ ಆರ್ಥಿಕ, ಸಾಮಾಜಿಕ ಹಾಗೂ ಪರಿಸರ ಅಂಶಗಳ ಮೇಲೆ ಬದಲಾಯಿಸಲಾಗದ ಮತ್ತು ಹಿಂಜರಿಯುವಂತಹ ಪರಿಣಾಮಗಳನ್ನು ಬೀರುತ್ತದೆ ಎಂದು ವಾದಿಸಲಾಗಿದೆ. ಜೊತೆಗೆ, ಇದು ಜೀವನ, ಜೀವನಾಧಾರ, ಸ್ವಚ್ಛ ಪರಿಸರ ಹಾಗೂ ವಸತಿ ಹಕ್ಕುಗಳ ಮೇಲೆ ನೇರ ಪರಿಣಾಮ ಬೀರುತ್ತದೆ ಹಾಗೂ ಸ್ಥಳೀಯ ಸಮುದಾಯಗಳೊಂದಿಗೆ ಸಮಾಲೋಚನೆ ಮಾಡಿದ ನಂತರ ಹಾಗೂ ಕೆಟಿಸಿಪಿ ಕಾಯ್ದೆ, ಪರಿಸರ ರಕ್ಷಣೆ ಕಾಯ್ದೆ, 1986 (ಇಐಎ ಅಧಿಸೂಚನೆ 2006), ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ, 1976 ಹಾಗೂ ರಸ್ತೆ ವ್ಯಾಪಾರಿಗಳ (ಜೀವನಾಧಾರಗಳ ರಕ್ಷಣೆ ಹಾಗೂ ರಸ್ತೆ ವ್ಯಾಪಾರ ನಿರ್ಬಂಧನೆ) ಕಾಯ್ದೆ, 2014ರ ನಗರ ಯೋಜನೆ ಹಾಗೂ ವಿನ್ಯಾಸ ನಿಯಮಗಳ ಪ್ರಕಾರ ಮಾತ್ರ ಕೈಗೊಳ್ಳಬೇಕು.

ಬೆಂಗಳೂರಿನಂತಹ ನಗರಗಳು, ಕೇವಲ ಕಾರುಗಳಲ್ಲಿ ಓಡಾಡುವಂತಹ ಜನರಿಗಲ್ಲದೆ ಎಲ್ಲಾ ವರ್ಗಗಳ ಜನರೂ ಓಡಾಡಲು ಅನುಕೂಲವಾಗುವಂತಹ ರಸ್ತೆಗಳ ನಿರ್ಮಾಣದ ವಕಾಲತ್ತು ವಹಿಸುವಂತಹ, ರಾಷ್ಟ್ರೀಯ ನಗರ ಸಾರಿಗೆ ನೀತಿಯಲ್ಲಿರುವಂತಹ ಪ್ರಗತಿಪರ ಅಂಶಗಳನ್ನು ಅಳವಡಿಸಿಕೊಳ್ಳುವಂತೆ ಮಾಡುವುದು ಪ್ರಯತ್ನವಾಗಿದೆ. ವಾದಿಸಿರುವಂತೆ ರಸ್ತೆಗಳು ನಗರಗಳ ಮುಖವಿದ್ದಂತೆ, ಇದು ಇಂದಿನ ಹಾಗೂ ಭವಿಷ್ಯದ ತಲೆಮಾರುಗಳ ಎಲ್ಲಾ ವರ್ಗಗಳ ಜನರೂ ಸಮಾನವಾಗಿ ಬಳಸುವಂತೆ ನಗರಗಳನ್ನು ರೂಪಿಸಬೇಕು. ಇಂದಿನ ಹಾಗೂ ಭವಿಷ್ಯದ ತಲೆಮಾರುಗಳ ಸಾರ್ವಜನಿಕ ಆಸಕ್ತಿಯನ್ನು ಕಾಪಾಡಲು, ಸಾರ್ವಜನಿಕ ಸಾರಿಗೆಗೆ ಹೆಚ್ಚು ಒತ್ತು ನೀಡಲು ಹಾಗೂ ಖಾಸಗಿ ಸಾರಿಗೆಯನ್ನು ಕಡಿಮೆಗೊಳಿಸಲು - ಶಬ್ದ ಹಾಗೂ ವಾಯು ಮಾಲಿನ್ಯಗಳಂತಹ ಮಧ್ಯಸ್ಥಿಕೆಗಳಿಗೆ ಮಹತ್ತರವಾದ ಕೊಡುಗೆ ನೀಡಲು ವಕಾಲತ್ತು ಹೆಚ್ಚು ಒತ್ತು ನೀಡುತ್ತದೆ. ಇಂತಹ ವಿಧಾನಗಳು, ರಸ್ತೆಗಳನ್ನು ಸಮಾನವಾಗಿ ಬಳಸುವ ಹಕ್ಕು ಹೊಂದಿರುವಂತಹ ಪಾದಚಾರಿಗಳು ಹಾಗೂ ಸೈಕಲ್ ಸವಾರರ ಹಕ್ಕುಗಳನ್ನೂ ರಕ್ಷಿಸಿ, ಭದ್ರಗೊಳಿಸುತ್ತದೆ. ಈ ಅಭಿಯಾನ ಯೋಜನೆಯಲ್ಲಿ ಸೂಕ್ಷ್ಮತೆ ಹಾಗೂ ರಸ್ತೆಗಳ ವಿಸ್ತರಣೆಯನ್ನು ಬೇಡುತ್ತದೆ. ಆದರೆ ಬಹುಪಾಲು ರಸ್ತೆಗಳು ಶತಮಾನಗಳಿಂದ ಲಕ್ಷಾಂತರ ಬೀದಿ ವ್ಯಾಪಾರಿಗಳಿಗೆ ಜೀವನಾಧಾರದ ಸ್ಥಳಗಳಾಗಿವೆ. ಜೊತೆಗೆ, ಈ ರಸ್ತೆಗಳಲ್ಲಿ ಶತಮಾನಗಳಷ್ಟು ಹಳೆಯ ಮರಗಳಿವೆ. ಈ ಪ್ರಕರಾಣು ಈ ಪ್ರಸ್ತಾವನೆಯು ಬದಲಾಯಿಸಲಾಗದಂತಹ ಜೀವಂತ ಸಾಂಪ್ರದಾಯಿಕ ನಷ್ಟವನ್ನು ಉಂಟು ಮಾಡುತ್ತದೆ. ಬಿಬಿಎಂಪಿ ಈಗ ಪ್ರಸ್ತಾಪಿಸಿರುವಂತೆ ರಸ್ತೆ ವಿಸ್ತರಣೆ ಈ ಯಾವುದೇ ಅಂಶಗಳನ್ನೂ ಗ್ರಹಿಸುವುದಿಲ್ಲ ಹಾಗೂ ನಗರವನ್ನು ಆತ್ಮರಹಿತ ನಗರವನ್ನಾಗಿಸುತ್ತದೆ ಮತ್ತು ಲಕ್ಷಾಂತರ ಜನರ ಜೀವನ ಹಾಗೂ ಜೀವನಾಧಾರಗಳಿಗೆ ಚ್ಯುತಿ ತರುತ್ತದೆ.

ರಸ್ತೆಗಳನ್ನು ವಿಸ್ತರಣೆ ಮಾಡುವ ನೆಪದಲ್ಲಿ ರಸ್ತೆ ಬದಿಗಳಲ್ಲಿರುವಂತಹ ಲಕ್ಷಾಂತರ ಮರಗಳನ್ನು ಕೆಡುವುದರಿಂದ ವಾತಾವರಣದಲ್ಲಿ ಉಷ್ಣತೆ ತೀವ್ರವಾಗುವುದನ್ನು ರುಜುವಾತಪಡಿಸುವಂತಹ ಹಲವು ವೇದಿಕೆಗಳಲ್ಲಿ ಜಗತ್ತಿನ ವಿವಿಧ ಸ್ಥಳಗಳ ಸಾಕ್ಷಿಯನ್ನು ಬಹಿರಂಗವಾಗಿ ಪ್ರದರ್ಶಿಸಲಾಗಿದೆ. ಇದರಿಂದ ಪ್ರಸ್ತುತ ನಗರಗಳಲ್ಲಿರುವ ವಿನ್ಯಾಸದ ಕಟ್ಟಡಗಳ

ಪ್ರಕಾರ, ಇಂಧನ ಹಾಗೂ ನೀರಿನ ಬೇಡಿಕೆ ಹೆಚ್ಚುತ್ತದೆ. ರಸ್ತೆ ವಿಸ್ತರಣೆ ರಸ್ತೆ ಅಪಘಾತಗಳನ್ನು ಹೆಚ್ಚಿಸುತ್ತದೆ ಮತ್ತು ಇದರಲ್ಲಿ ಬಹುಪಾಲು ಹಿರಿಯ ನಾಗರೀಕರು, ಪಾದಚಾರಿಗಳು ಹಾಗೂ ಸೈಕಲ್ ಸವರಾರರೇ ಹೆಚ್ಚು ಅಪಾಯಕ್ಕೆ ಈಡಾಗುವ ಸಾಧ್ಯತೆಗಳಿವೆ. ರಸ್ತೆ ವಿಸ್ತರಣೆಯಿಂದ ಉಂಟಾಗಬಹುದಾದಂತಹ ಈ ಎಲ್ಲಾ ಪರಿಣಾಮಗಳನ್ನು ಗಮನಿಸಿ, ಏಷ್ಯಾ, ಆಫ್ರಿಕ ಮತ್ತು ದಕ್ಷಿಣ ಅಮೇರಿಕಾದಂತಹ ಮತ್ತು ಯೂರೋಪ್ ಹಾಗೂ ಉತ್ತರ ಅಮೇರಿಕಾದಂತಹ ಬಹುಪಾಲು ಪ್ರಗತಿಪರ ನಗರಗಳು, ವೈವಿಧ್ಯಮಯ ಸಾರ್ವಜನಿಕರ ಬೇಡಿಕೆಯನ್ನು ಪರಿಗಣಿಸಿ, ರಸ್ತೆ ವಿಸ್ತರಣೆಯ ಪ್ರಸ್ತಾವನೆಗಳನ್ನು ಕೈಬಿಟ್ಟಿವೆ. ಈ ಪ್ರಕಾರ ಅವರು ನಗರಗಳ ಆರ್ಥಿಕ ಮೌಲ್ಯಗಳನ್ನು ಖಾತ್ರಿಪಡಿಸಿವೆ (ಉದಾಹರಣೆಗೆ, ಸಿಯೊಲ್, ಕ್ಯುರಿಟಿಬ) ಹಾಗೂ ಅವುಗಳ ನಿರ್ಧಾರಗಳು ಸಾಮಾಜಿಕವಾಗಿ ನ್ಯಾಯಬದ್ಧವಾಗಿವೆ (ಸೈಕಲ್ ಸವಾರರಿಗೆ, ವ್ಯಾಪಾರಿಗಳಿಗೆ ಹಾಗೂ ಪಾದಚಾರಿಗಳಿಗೆ ಹೆಚ್ಚು ಅನುಕೂಲ ಮಾಡಿಕೊಟ್ಟಿವೆ. ಉದಾಹರಣೆಗೆ: ಆ್ಯಮ್‌ಸ್ಟರ್‌ಡ್ಯಾಂ, ಡರ್ಬನ್). ಪರಿಣಾಮವಾಗಿ ಈ ನಗರಗಳು, ಪ್ರಸ್ತುತ ದೆಹಲಿ, ಬೀಜಿಂಗ್ ಹಾಗೂ ಬೆಂಗಳೂರು ನಗರಗಳು ಎದುರಿಸುತ್ತಿರುವಂತಹ ಪರಿಸರ ಮಾಲಿನ್ಯ ನಾಶವನ್ನು ತಡೆಗಟ್ಟುವುಂತಹ, ನಗರ ಬೆಳವಣಿಗೆಯ ಸುಸ್ಥಿರ ಪರಿಸರ ಮಾದರಿಗಳಾಗಿವೆ.


| | | |
|---|---|---|
| ಭಾರ್ಗವಿ, ಎಸ್,ರಾವ್ | ಲಿಯೋ,ಎಫ್,ಸಲ್ಡಾನ | ಸುನಿಲ್ ದತ್ ಯಾದವ್ |
| ಪಾರುಪತ್ಯಗಾರ, | 2ನೇ ಅರ್ಜಿದಾರ (ಪಕ್ಷದ ವ್ಯಕ್ತಿ) | W.P. No. 7107/2008 ಮೊಕದ್ದಮೆಯ |
| ಪರಿಸರ ಬೆಂಬಲ ತಂಡ | leo@esgindia.org | 1ನೇ & 3ನೇ ಅರ್ಜಿದಾರರ ವಕೀಲ |
| 1ನೇ ಅರ್ಜಿದಾರ | | sunil_dy@yahoo.com |
| bhargavi@esgindia.org | | |

ಕಾತ್ಯಾಯಿನಿ ಚಾಮರಾಜ್
ಕಾರ್ಯಕಾರಿ ಪಾರುಪತ್ಯಗಾರ,
ಸಿವಿಕ್, ಬೆಂಗಳೂರು.- 3ನೇ ಅರ್ಜಿದಾರ
info@civicspace.in


**ಸೂಚನೆ:-** ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಪ್ರತಿಯನ್ನು, ಮಧ್ಯಂತರ ಆದೇಶಗಳನ್ನು ಮತ್ತು ವಿವಿಧ ದಾಖಲಾತಿ ಸಾಮಗ್ರಿಗಳನ್ನು ಈ ಕೆಳಗಿನ ವೆಬ್‌ಸೈಟ್‌ನಲ್ಲಿ ಸುಲಭವಾಗಿ ನೋಡಬಹುದು.

: http://www.esgindia.org/campaigns/resources/esgs-pil-against-road-widening-and-tree-.html
ಸಂಬಂಧಿಸಿದ ಸಮಸ್ಯೆಗಳ ದಾಖಲಾತಿಗಳನ್ನು ಈ ವೆಬ್‌ಸೈಟ್ ಮೂಲಕ ನೋಡಬಹುದು.

ಬಗ್ಗೆ ಸಂಬಂಧಿತ ದಸ್ತಾವೇಜನ್ನು ಪ್ರವೇಶಿಸಲು ಮಾಡಬಹುದು
http://www.esgindia.org/campaigns/hasire-usiru/resources/hasire-usiru-campaign-reclaim-bangalores.html-6


ಪರಿಸರ ಬೆಂಬಲ ತಂಡ
(ಪರಿಸರ, ಸಾಮಾಜಿಕ ನ್ಯಾಯ ಮತ್ತು ಆಡಳಿತ ಉಪಕ್ರಮಗಳು)
#1572, 36ನೇ ಅಡ್ಡರಸ್ತೆ, 100 ಅಡಿ ವರ್ತುಲ ರಸ್ತೆ,
ಬನಶಂಕರಿ 2ನೇ ಹಂತ,
ಬೆಂಗಳೂರು 560070, ಭಾರತ.
Tel: +91-80-26713559~61
Voice/Fax: +91-80-26713316
Email: esg@esgindia.org
Web: www.esgindia.org